ಮೂಲ ದಾವಾ ಸಂಖ್ಯೆ.52/2020 ಪಿ ಡಬ್ಲ್ಯೂ 1

(ದಿನಾಂಕ 25-06-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣಿಕರಿಸಲಾಯಿತು.)

ಪಾಟೀ ಸವಾಲುಃ 10 ನೇ ಪ್ರತಿವಾದಿ ಪರ ಶ್ರೀ ಬಿ ಬಿ ಆರ್ ವಕೀಲರಿಂದಃ-

ನಾನು ಐ ಟಿ ಐ ವಿದ್ಯಾಭ್ಯಾಸ ಮಾಡಿದ್ದೇನೆ. ನಮ್ಮ ತಂದೆಯವರು ಏನು ವಿದ್ಯಾಭ್ಯಾಸ ಮಾಡಿದ್ದಾರಂತಾ ನನಗೆ ಗೊತ್ತಿಲ್ಲ. 10 ನೇ ಪ್ರತಿವಾದಿ ಐ ಟಿ ಐ, 3 ನೇ ಪ್ರತಿವಾದಿ ಪಿ ಯು ಸಿ ವರೆಗೆ, 7 ನೇ ಪ್ರತಿವಾದಿ 7 ನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡಿದ್ದಾರೆ ಉಳಿದವರು ವಿದ್ಯಾವಂತರಲ್ಲ. ನಮ್ಮ ತಂದೆಯವರು ಜೀವಂತ ಇರುವಾಗ ವಿದ್ಯಾಭ್ಯಾಸ ಮಾಡಿರುತ್ತಾರೆ.

ನಾವು ಸಹೋದರರೆಲ್ಲೂ ಕೂಡು ಕುಟುಂಬದಲ್ಲಿರುವುದಿಲ್ಲ ಬೇರೆ ಬೇರೆ ವಾಸವಾಗಿರುತ್ತೇವೆ. 8 ನೇ ಪ್ರತಿವಾದಿ ನನ್ನ ಸಹೋದರಿ ವಿವಾಹವಾಗಿ ತನ್ನ ಗಂಡನ ಮನೆಯಲ್ಲಿ ವಾಸವಾಗಿರುತ್ತಾರೆ. ನಾನು 20 ವರ್ಷ ವಯಸ್ಸಿನಲ್ಲಿದ್ದಾಗ ನಾನು ಮತ್ತು ನಮ್ಮ ಸಹೋದರರು ಬೇರೆ ಬೇರೆಯಾಗಿರುತ್ತೇವೆ. ನಾನು 20 ನೇ ವರ್ಷ ವಯಸ್ಸಿನಲ್ಲಿದ್ದು ಬೇರೆಯಾದಾಗ ನಮ್ಮ ನಮ್ಮ ಹಿಸ್ಸೆಗೆ ಬಂದ ಭೂಮಿಗಳನ್ನು ನಾವು ಉಳುಮೆ ಮಾಡುತ್ತಾ ಬಂದಿರುತ್ತೇವೆಂದರೆ ಸರಿ. ನನ್ನ ತಂದೆಯವರು ಮತ್ತು ನನ್ನ ಸಹೋದರರು, ನಾನು ಎಲ್ಲರೂ ಸೇರಿ ಭೂಮಿಗಳಲ್ಲಿ ನಿಖರವಾದ ಕ್ಷೇತ್ರವನ್ನು ಮಾಡಿಕೊಂಡು ಬಂದಿರುತ್ತೇವೆಂದರೆ ಸರಿ. ನಾನು ಸರ್ವೆ ನಂ.113 ಎ ರಲ್ಲಿ ಸುಮಾರು 1 ರಿಂದ 1 ವರೆ ಎಕರೆ ಜಮೀನಿನಲ್ಲಿ ಸ್ವಾಧೀನದಲ್ಲಿದ್ದೇನೆ ಮತ್ತು ಸರ್ವೆ ನಂ.111 ರಲ್ಲಿ 2 ಎಕರೆ ಜಮೀನು ಸ್ವಾಧೀನದಲ್ಲಿದ್ದೇನೆ. ಸದರಿ ಭೂಮಿಗಳು ನಮ್ಮ ತಂದೆಯವರ ಸಮಯದಲ್ಲಿ ವಿಭಾಗ ಮಾಡಿದಾಗ ನನಗೆ ಬಂದ ಭೂಮಿಗಳು ಎಂದರೆ ಸರಿ. ದಾವಾ 2 ನೇ ಆಸ್ತಿ ಸರ್ವೆ ನಂ.410/1 ರ 13.95 ಎಕರೆ ಜಮೀನಿನಲ್ಲಿ 1, 2, 3, 4, 5, 7, 9 ಮತ್ತು 10 ನೇ ಪ್ರತಿವಾದಿಗಳು ಸ್ವಾಧೀನದಲ್ಲಿರುತ್ತಾರೆಂದರೆ ಸರಿ. ಸದರಿಯವರಿಗೆ ಸದರಿ ಸರ್ವೆ ನಂಬರಿನಲ್ಲಿ ಪಾಲುವಿಭಾಗ ಬಂದಿತ್ತು ಎಂದರೆ ಸರಿ. ದಾವಾ 3 ನೇ ಆಸ್ತಿ ಸರ್ವೆ ನಂ.407 ರಲ್ಲಿ 1 ರಿಂದ 9 ನೇ ಪ್ರತಿವಾದಿಗಳಿಗೆ ಪಾಲು ಬಂತು ಎಂದರೆ ಸರಿ. ಸರ್ವೆ ನಂ.113/ಎ ರ 8 ಎಕರೆ 10 ಸೆಂಟ್ಸ ಜಮೀನನ್ನು ನನ್ನ ತಂದೆಯವರು 10 ನೇ ಪ್ರತಿವಾದಿಯ ಹೆಂಡತಿಗೆ ಬಿಟ್ಟು ಕೊಟ್ಟಿರುತ್ತಾರೆಂದರೆ ಸರಿಯಲ್ಲ. ನನ್ನ ತಂದೆಯವರು ಬರವಣಿಗೆ ಮೂಲಕ ನಮ್ಮೆಲ್ಲ ಸಹೋದರರ ಸಹಿಗಳನ್ನು ಮಾಡಿಸಿ ಬಿಟ್ಟುಕೊಟ್ಟಿರುತ್ತಾರೆಂದರೆ ಸರಿಯಲ್ಲ.

ಸದರಿ ಸರ್ವೆ ನಂ.113/ಎ ಜಮೀನಿಗೆ ಸಂಬಂಧಿಸಿದಂತೆ ಮಾನ್ಯ ಇದೇ ನ್ಯಾಯಾಲಯದಲ್ಲಿ ಓ ಎಸ್ ನಂ. 143/2024 ನೇ ದಾವೆಯು ದಾಖಲಾಗಿರುತ್ತದೆ ಅದರಲ್ಲಿ ನಾನೂ ಸಹಾ ಹಾಜರಾಗಿದ್ದೇನೆಂದರೆ ಸರಿಯಲ್ಲ. ಆ ವಿಚಾರ ನನಗೆ ಗೊತ್ತಿದ್ದರೂ ಸುಳ್ಳು ಹೇಳುತ್ತಿದ್ದೇನೆಂದರೆ

ಸರಿಯಲ್ಲ. ಸರ್ವೆ ನಂ.114 ರ 8 ಎಕರೆ 84 ಸೆಂಟ್ಸ ಜಮೀನನ್ನು ನನ್ನ ಮತ್ತು 10 ನೇ ಪ್ರತಿವಾದಿಯ ವಿವಾಹಕ್ಕಾಗಿ ತೆಗೆದಿಟ್ಟಿದ್ದರು ಎಂದರೆ ಸರಿಯಲ್ಲ. ನಾವು ಬೇರೆಯಾಗಿದ್ದೇವೆ ಎನ್ನುವ ಸಮಯಕ್ಕೆ ನಾನು ಮದುವೆಯಾಗಿರಲಿಲ್ಲ. ಆ ಸಮಯದಲ್ಲಿ 10 ನೇ ಪ್ರತಿವಾದಿ ಮದುವೆ ಸಹಾ ಆಗಿರಲಿಲ್ಲ. ನನ್ನ ಮತ್ತು 10 ನೇ ಪ್ರತಿವಾದಿಯ ಮದುವೆ ಖರ್ಚಿಗಾಗಿ ಸರ್ವೆ ನಂ.114 ರಲ್ಲಿ 4 ಎಕರೆ ಜಮೀನನ್ನು ತೆಗೆದಿಟ್ಟಿದ್ದರು ಎಂದರೆ ಸರಿಯಲ್ಲ. ಈ ವಿಚಾರ ಗೊತ್ತಿದ್ದರೂ ಸಹಾ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

ದಾವಾ 6 ನೇ ಆಸ್ತಿ ಸರ್ವೆ ನಂ. 408/ಬಿ ರ 6.60 ಎಕರೆ ಜಮೀನಿನಲ್ಲಿ ಪ್ರತಿವಾದಿ ನಂ.3, 4, 7, 9 ರವರು ಸ್ವಾಧೀನದಲ್ಲಿರುತ್ತಾರೆಂದರೆ ಸರಿ. ದಾವಾ 7 ನೇ ಆಸ್ತಿ ಸರ್ವೆ ನಂ.408/ಎ ರ 6.51 ಎಕರೆ ಜಮೀನಿನಲ್ಲಿ 7, 9 ನೇ ಪ್ರತಿವಾದಿಯರು ಸ್ವಾಧೀನದಲ್ಲಿದ್ದು ಅದು ಅವರ ಭಾಗಕ್ಕೆ ಬಂದಿದೆ ಎಂದರೆ ಸರಿ. ಅದೇ ರೀತಿ ಮ್ಯುಟೇಶನ್ ಮಾಡಿಕೊಡಲು ತಹಶೀಲ್ದಾರ್ ಕಚೇರಿಗೆ ಅರ್ಜಿ ಸಲ್ಲಿಸಿರುತ್ತೇನಂತಾ ನಾನು ವಾದಪತ್ರದಲ್ಲಿ ಹೇಳಿದ್ದೇನೆ ಎಂದರೆ ಸರಿ ಸಾಕ್ಷಿ ಮುಂದುವರೆದು ಅದು ಆಗಲಿಲ್ಲ ನಾನು ನನ್ನಸಹೋದರರಿಗೆ ವಿಚಾರಿಸಿದೆ ಅವರು ನನಗೆ ಯಾವುದೇ ಪ್ರತಿಕ್ರಿಯೆ ನೀಡಲಿಲ್ಲ ಆದ್ದರಿಂದ ನ್ಯಾಯಾಲಯಕ್ಕೆ ದಾವೆ ಸಲ್ಲಿಸಿದ್ದೇನೆ ಎನ್ನುತ್ತಾರೆ. ನನ್ನ ಸಹೋದರರೆಲ್ಲರೂ ಅವರಿಗೆ ಬಂದತಂಹ ವಿಭಾಗದ ಜಮೀನುಗಳಲ್ಲಿ ಅವರು ಬೋರ್ವೆಲ್ ಗಳನ್ನು ಹಾಕಿಕೊಂಡು ಅದಕ್ಕೆ ವಿದ್ಯುತ್ ಸಂಪರ್ಕವನ್ನು ಪಡೆದುಕೊಂಡಿರುತ್ತಾರೆಂದರೆ ಸರಿ ಸಾಕ್ಷಿ ಮುಂದುವರೆದು ಹೊಟ್ಟೆಪಾಡಿಗೆ ಮಾಡಿದ್ದಾರೆಂದು ನುಡಿಯುತ್ತಾರೆ.

(ಈ ಹಂತದಲ್ಲಿ 10 ನೇ ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀಸವಾಲಿಗೆ ಸಮಯಾವಕಾಶ ಕೋರಿದ್ದು ನೀಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ,

ಸಿವಿಲ್ ಜಡ್ಜ ಮತ್ತು ಜೆ ಎಂ ಎಫ್ ಸಿ.,
ಹಗರಿಬೊಮ್ಮನಹಳ್ಳಿ